ನೆಚ್ಚಿಕೊಂಡಿದ್ದರೆ ನಂಜುಂಡ ಬದುಕು ನಡೆಸಲು ಸಾಧ್ಯವಾಗುತ್ತಿರಲಿಲ್ಲವೇನೋ. ಇಲ್ಲಿ ಅವಕಾಶಗಳ ಕೊರತೆಯಾದಾಗಲೆಲ್ಲ ಅವರಿಗೆ ಆಸರೆ ನೀಡಿದ್ದು ತೆಲುಗು–ತಮಿಳು ಚಿತ್ರರಂಗಗಳು. ಸ್ಕ್ರಿಪ್ಟ್ ಡಿಸ್ಕಷನ್‌ಗೆಂದು ಚೆನ್ನೈ, ಹೈದರಾಬಾದ್‌ಗಳಿಂದ ಅವರಿಗೆ ಕರೆ ಬರುತ್ತಿತ್ತು. ಅಲ್ಲಿನ ಕೆಲಸದ ರೀತಿ ಕಂಡು, ಅಲ್ಲಿ ಕಥೆಗಾರರಿಗೆ ಸಿಗುವ ಸವಲತ್ತು ಹಾಗೂ ಗೌರವ ಕಂಡು ನಂಜುಂಡ ಸೋಜಿಗಗೊಂಡಿದ್ದರು. ಕನ್ನಡದಲ್ಲಿ ಸಿನಿಮಾ ಬರವಣಿಗೆಗೆ ಅಂಥ ಬೇಡಿಕೆ ಹಾಗೂ ಮೌಲ್ಯ ಇಲ್ಲ ಎನ್ನುವುದು ಅವರ ನಿರಂತರ ಕೊರಗಾಗಿತ್ತು.

ಸ್ಕ್ರಿಪ್ಟ್ ಬರವಣಿಗೆಯನ್ನು ನಂಜುಂಡ ಗಂಭೀರವಾಗಿ ಪರಿಗಣಿಸಿದ್ದರು. ಇಂಗ್ಲಿಷ್, ಹಿಂದಿ, ತೆಲುಗು, ತಮಿಳು ಭಾಷೆಗಳನ್ನು ಅರಿತಿದ್ದ ಅವರು, ಆ ಭಾಷೆಗಳ ಉತ್ತಮ ಚಿತ್ರಗಳನ್ನು ನೋಡುತ್ತಿದ್ದರು. ಅವುಗಳ ಚಿತ್ರಕಥಾ ಮಾದರಿಗಳನ್ನು ಅಧ್ಯಯನ ಮಾಡುತ್ತಿದ್ದರು. ಜೊತೆಗೆ ಜಗತ್ತಿನ ಚಿತ್ರಕಥಾ ಗುರು ಸಿಡ್ ಫೀಲ್ಡ್ ಸೇರಿದಂತೆ ಹಲವರ ಸ್ಕ್ರೀನ್ ಪ್ಲೇ ಪುಸ್ತಕಗಳನ್ನು ಓದಿಕೊಂಡಿದ್ದರು; ತಮಿಳು ನಟ, ನಿರ್ದೇಶಕ ಭಾಗ್ಯರಾಜ್ ಸಿನಿಮಾ ಬಗ್ಗೆ ಬರೆದ ಪುಸ್ತಕ, ಥ್ರೀ ಈಡಿಯಟ್ಸ್ ಒರಿಜಿನಲ್ ಸ್ಕ್ರೀನ್ ಪ್ಲೇ ಪುಸ್ತಕದ ಬಗ್ಗೆ ಪದೇ ಪದೇ ಪ್ರಸ್ತಾಪ ಮಾಡುತ್ತಿದ್ದರು. ಹೀಗೆ ಅವರು ಅಪಾರ ಕಾಲ ಹಾಗೂ ಶ್ರಮ ವ್ಯಯಿಸಿ ಸ್ಕ್ರೀನ್ ಪ್ಲೇ ಬಗ್ಗೆ ಅಗಾಧ ಜ್ಞಾನವನ್ನು ಗಳಿಸಿಕೊಂಡಿದ್ದರು. ಅದರ ಜೊತೆಗೆ ತೆಲುಗು, ತಮಿಳು, ಮಲೆಯಾಳಂ, ಹಿಂದಿ ಭಾಷೆಗಳಲ್ಲಿ ಪ್ರತಿ ವಾರ ಬಿಡುಗಡೆಯಾಗುವ ಸಿನಿಮಾಗಳನ್ನು ತಪ್ಪದೇ ಗಮನಿಸುತ್ತಿದ್ದರು. ಇದರಿಂದ ಸಮಕಾಲೀನ ಕಮರ್ಷಿಯಲ್ ಸಿನಿಮಾದ ಬಗ್ಗೆ ಎಂಥ ಜ್ಞಾನ ಗಳಿಸಿಕೊಂಡಿದ್ದರೆಂದರೆ, ಯಾರಾದರೂ ಅವರಿಗೆ ಒಂದು ಕಥೆ ಹೇಳಿದರೆ, ಅದು ಯಾವ ಭಾಷೆಯ ಯಾವ ಚಿತ್ರದ ಜೊತೆ ಹೋಲಿಕೆಯಾಗುತ್ತದೆ; ಯಾವ ಚಿತ್ರವನ್ನು ಮತ್ತಾವ ಚಿತ್ರದ ರೆಫರೆನ್ಸ್ ಆಧಾರದ ಮೇಲೆ ತೆಗೆಯಲಾಗಿದೆ ಎಂಬುದನ್ನು ತಕ್ಷಣವೇ ಹೇಳಿಬಿಡಬಲ್ಲವರಾಗಿದ್ದರು.

ನಂಜುಂಡ ಅವರಿಗೆ ಸಿನಿಮಾ ಸ್ಕ್ರಿಪ್ಟ್ ಎನ್ನುವುದು ಒಂದು ವ್ಯಸನವಾಗಿತ್ತು. ಕಣ್ಣಿಗೆ ಕಂಡ ಪ್ರತಿಯೊಂದರಲ್ಲೂ ಸಿನಿಮಾ ಕಥೆಯನ್ನು, ದೃಶ್ಯಗಳನ್ನು ಹುಡುಕುತ್ತಿದ್ದರು. ಅವರಿಗೆ ಸಾಹಿತ್ಯ ಕೃತಿಗಳನ್ನು ಓದುವ ಹವ್ಯಾಸವಿರಲಿಲ್ಲ. ಆದರೆ, ತನ್ನ ಸುತ್ತ ನಡೆಯುವ ಘಟನೆಗಳು, ವಿದ್ಯಮಾನಗಳ ಬಗ್ಗೆ, ಅವುಗಳ ಬಗ್ಗೆ ಮಾಧ್ಯಮಗಳಲ್ಲಿ ಬರುವ ಸುದ್ದಿ ತುಣುಕುಗಳ ಬಗ್ಗೆ ಮೈಯೆಲ್ಲ ಕಣ್ಣಾಗಿರುತ್ತಿದ್ದರು. ಇತ್ತೀಚೆಗೆ ಪ್ರಶ್ನೆಪತ್ರಿಕೆ ಸೋರಿಕೆ ಹಗರಣದ ಬಗ್ಗೆ ಕಥೆಯೊಂದನ್ನು ಸಿದ್ಧಪಡಿಸಿ ನಿರ್ಮಾಪಕರೊಬ್ಬರಿಗೆ ಹೇಳಿದ್ದರು. ಅದು ನಿರ್ಮಾಪಕರಿಗೆ ಇಷ್ಟವಾಗಿತ್ತು ಕೂಡ. ಆದರೆ, ನಾನಾ ಕಾರಣಗಳಿಗಾಗಿ ನಿರ್ಮಾಪಕರು ಆ ಪ್ರಾಜೆಕ್ಟ್ ಕೈಬಿಟ್ಟರು. ನಂಜುಂಡ ಅವರ ಜೀವನದಲ್ಲಿ ಹೀಗೆ ಕೈಬಿಟ್ಟ ಕಥೆಗಳು, ಕೈಗೂಡದ ಚಿತ್ರಗಳ ಸಂಖ್ಯೆ ದೊಡ್ಡದು.

ನಂಜುಂಡ ಕೊಂಚ ನೇರ ಮಾತಿನ ಮನುಷ್ಯ. ಸಿನಿಮಾ ನಿರ್ಮಾಣ ಪ್ರಕ್ರಿಯೆಯಲ್ಲಿ ಕಥೆಗಾರ ಕೂಡ ನಟ, ನಿರ್ದೇಶಕರಷ್ಟೇ ಮುಖ್ಯ ವ್ಯಕ್ತಿ; ಅವನಿಗೂ ಸೂಕ್ತ ಮರ್ಯಾದೆ, ಸವಲತ್ತು ಸಿಗಬೇಕು ಎನ್ನುವುದು ಅವರ ನಿಲುವಾಗಿತ್ತು. ಅದಕ್ಕಾಗಿ ಚಿತ್ರಕಥಾ ಬರಹಗಾರರನ್ನು ಸಂಘಟಿಸುವ ಪ್ರಯತ್ನ ಕೂಡ ನಡೆಸಿದ್ದರು. ಅವರ ಇಂಥ ಪ್ರಯತ್ನಗಳು ಹಾಗೂ ನೇರ ಮಾತುಗಳಿಂದ 'ಜಂಬದ ಮನುಷ್ಯ' ಎನ್ನುವ ಹಣೆಪಟ್ಟಿಯೂ ಅವರಿಗೆ ಅಂಟಿಕೊಂಡಿತ್ತು. ಇದೂ ಕೂಡ ಅವರ ವೃತ್ತಿಜೀವನದಲ್ಲಿ ಹಿನ್ನಡೆಗೆ ಕಾರಣವಾಯಿತು ಎನ್ನುವವರಿದ್ದಾರೆ.

ನಂಜುಂಡ, ವರನಟ ರಾಜಕುಮಾರ್ ಅವರ ಬದುಕು ಹಾಗೂ ಸಾಧನೆ ಬಗ್ಗೆ ಅನನ್ಯವಾಗಿ ವಿಶ್ಲೇಷಣೆ ಮಾಡುತ್ತಿದ್ದರು. ಸಿನಿಮಾ ಕುರಿತ ಅಣ್ಣಾವ್ರ ಬದ್ಧತೆ ಹಾಗೂ ನಿಷ್ಠೆ, ಕಥೆಯ ವಿಚಾರದಲ್ಲಿ ರಾಜ್ ಕುಟುಂಬ ತೆಗೆದುಕೊಳ್ಳುತ್ತಿದ್ದ ಜಾಗರೂಕತೆಯನ್ನು ಕೊಂಡಾಡುತ್ತಿದ್ದರು. ಯಾವ ನಟ ಅಥವಾ ನಿರ್ದೇಶಕ ಕಥೆಯ ಬಗ್ಗೆ ಉತ್ತಮ ಜಡ್ಜ್‌ಮೆಂಟ್ ನೀಡಬಲ್ಲನೋ ಅವರು ಮಾತ್ರ ದೊಡ್ಡ ಎತ್ತರಕ್ಕೆ ಬೆಳೆಯಲು ಸಾಧ್ಯ ಎನ್ನುವುದು ಅವರ ಅಚಲ ನಂಬಿಕೆಯಾಗಿತ್ತು. ಕನ್ನಡದಲ್ಲಿ ರಾಜ್ ಚಿತ್ರಗಳಿಗೆ ಉದಯಶಂಕರ್ ಬರೆದ ಹಲವು ಕಥೆಗಳು; 'ಶಂಕರ್ ಗುರು' ಹಾಗೂ 'ಸೀತಾರಾಮು' ಚಿತ್ರಗಳಿಗೆ ಎಂ.ಡಿ. ಸುಂದರ್ ಬರೆದ, ಆ ಕಾಲಕ್ಕೆ ಕಮರ್ಷಿಯಲ್ ಸಿನಿಮಾ ಕಮರ್ಷಿಯಲ್ ಕ್ಲೀಷೆಗಳಿಂದ, ಸಿದ್ಧಸೂತ್ರಗಳಿಂದ ಮುಕ್ತವಾಗದೇ ಇದ್ದದ್ದು ನಂಜುಂಡರ ದೊಡ್ಡ ಮಿತಿಯಾಗಿತ್ತು. ಹಾಗಾಗಿಯೇ ಅವರಿಗೆ ತೀರಾ ಒರಿಜಿನಲ್ ಎನ್ನುವಂಥ ಕಥೆಯನ್ನು ಮಾಡಲು ಕೊನೆಯವರೆಗೂ ಸಾಧ್ಯವಾಗಲೇ ಇಲ್ಲ.

ಇಂದು ಕನ್ನಡ ಸೇರಿದಂತೆ ಬಹುತೇಕ ಎಲ್ಲ ಭಾಷೆಗಳಲ್ಲೂ ಚಿತ್ರಬರಹಗಾರರು ಬದುಕು ನಡೆಸುವುದೇ ದುಸ್ತರವಾಗಿದೆ. ಮಾಡಿದ ಕೆಲಸಕ್ಕೆ ಅವರಿಗೆ ಸಂಭಾವನೆ ಸಿಗುವುದೇ ಅಪರೂಪ ಎನ್ನುವಂತಾಗಿದೆ. ಹಾಗಾಗಿಯೇ ಈಗ ಚಿತ್ರರಂಗದಲ್ಲಿ ಸ್ಕ್ರಿಪ್ಟ್ ಬರಹಗಾರರೇ ನಿರ್ದೇಶಕರಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಇಂಥ ಬಿಕ್ಕಟ್ಟಿನ ಕಾಲದಲ್ಲೂ ನಂಜುಂಡ ಸಿನಿಮಾ ಬರವಣಿಗೆಯನ್ನೇ ಅವಲಂಬಿಸಿ ಬದುಕುವ ಹಟ ತೊಟ್ಟಿದ್ದು ಅವರನ್ನು ಆರ್ಥಿಕವಾಗಿ ಹೈರಾಣು ಮಾಡಿತ್ತು. ಜೊತೆಗೆ ಕೆಲಸದ ವಿಚಾರದಲ್ಲಿ ಅವರ ಆಲಸಿತನ, ಸಂಬಂಧಗಳನ್ನು ನಿಭಾಯಿಸುವಲ್ಲಿನ ವೈಫಲ್ಯ, ಸಮಸ್ಯೆಗಳಿಗೆ ವಿಮುಖರಾಗಿ ಪಲಾಯನ ಮಾಡುವ ಗುಣಗಳಿಂದಾಗಿ ಅವರ ವೃತ್ತಿ ಬದುಕು ಹಾಗೂ ವೈಯಕ್ತಿಕ ಬದುಕುಗಳೆರಡರಲ್ಲೂ ಹತಾಶೆಗೊಂಡಿದ್ದರು. ಮೂರ್ನಾಲ್ಕು ವರ್ಷಗಳ ಹಿಂದೆ ಬದುಕು ಕೊನೆಗಾಣಿಸಿಕೊಳ್ಳಲು ಹೊರಟು ಅದೃಷ್ಟವಶಾತ್ ಬದುಕುಳಿದಿದ್ದರು. ಆದರೆ, ಅವರ




ಮಟ್ಟಿಗೆ ಕ್ರಾಂತಿಕಾರಕ ಎನ್ನಬಹುದಾಗಿದ್ದ ಕಥೆಗಳ ಬಗ್ಗೆ ನಂಜುಂಡ ಅವರಿಗೆ ಅಪಾರ ಮೆಚ್ಚುಗೆ ಇತ್ತು. ತೆಲುಗಿನಲ್ಲಿ 'ಪರುಚೂರಿ ಸೋದರರು' ಸುಮಾರು 350 ಚಿತ್ರಗಳಿಗೆ ಕಥೆ, ಚಿತ್ರಕಥೆ ಒದಗಿಸಿದ್ದರ ಬಗ್ಗೆ ಬೆರಗು ವ್ಯಕ್ತಪಡಿಸುತ್ತಿದ್ದರು.

ನಂಜುಂಡ ಇತ್ತೀಚೆಗೆ ಸ್ಕ್ರೀನ್ ರೈಟಿಂಗ್‌ಗಿಂತಲೂ ಹೆಚ್ಚಾಗಿ ಸ್ಕ್ರಿಪ್ಟ್ ಡಾಕ್ಟರಿಂಗ್‌ನತ್ತ ವಾಲಿದ್ದರು. ಒಂದು ಸ್ಕ್ರಿಪ್ಟ್ ಅನ್ನು ಓದಿ, ಅದರ ಲೋಪದೋಷಗಳನ್ನು ಹೇಳಿ, ಅದಕ್ಕೆ ತಿದ್ದುಪಡಿ ಮಾಡುವ ಆ ಪರಿಕಲ್ಪನೆಯ ಬಗ್ಗೆ ಇನ್ನೂ ನಮ್ಮ ಚಿತ್ರರಂಗಗಳಲ್ಲಿ ಅಂಥ ತಿಳಿವಳಿಕೆಯಾಗಲೀ ಬಳಕೆಯಾಗಲೀ ಇಲ್ಲ.

ಹೀಗೆ ನಾನಾ ಕಾರಣಗಳಿಂದ ಅವರ ಜ್ಞಾನ–ಕೌಶಲ್ಯವನ್ನು ಚಿತ್ರರಂಗ ಸಮರ್ಪಕವಾಗಿ ಬಳಸಿಕೊಳ್ಳದೇ ಅದರಿಂದ ಅತ್ತ ಚಿತ್ರರಂಗಕ್ಕೂ ಉಪಯೋಗವಾಗಲಿಲ್ಲ; ಇತ್ತ ನಂಜುಂಡ ಅವರ ಬದುಕೂ ಹಸನಾಗಲಿಲ್ಲ. ಇನ್ನೊಂದೆಡೆ, ಮನಸ್ಸು ಹಾಗೂ ದೇಹ ಜರ್ಜರಿತಗೊಂಡಿದ್ದವು. ದೀರ್ಘಕಾಲದಿಂದ ಕಾಡುತ್ತಿದ್ದ ಕಾಯಿಲೆಗಳೂ ಅವರ ಬದುಕು ಕೇವಲ 56 ವರ್ಷಕ್ಕೇ ಕೊನೆಗೊಳ್ಳಲು ಕಾರಣವಾದವು.

ಬದಲಾದ ಕಾಲದಲ್ಲೂ ಸುಮಾರು ಮೂವತ್ತು ವರ್ಷ ಸಿನಿಮಾ ಬರವಣಿಗೆಯನ್ನೇ ನಂಬಿಕೊಂಡು ಬದುಕು ನಡೆಸಿದ ಸಾಹಸಿ ನಂಜುಂಡ. ಹೊಸ ಕಾಲಮಾನದಲ್ಲಿ ಇಷ್ಟು ದೀರ್ಘ ಅವಧಿಗೆ ಸಿನಿಮಾ ಬರವಣಿಗೆಯನ್ನೇ ನಂಬಿಕೊಂಡು ಬದುಕಿದ್ದು ಅವರೊಬ್ಬರೇ ಅನಿಸುತ್ತದೆ; ಪ್ರಾಯಶಃ ಕೊನೆಯವರೂ ಕೂಡ.

ಬಡ ಟೈಲರ್ ಆಗಿದ್ದ ನಂಜುಂಡ ಅವರ ತಂದೆ ಸಣ್ಣ ವಯಸ್ಸಿಗೇ ದೀನವಾದ ಸ್ಥಿತಿಯಲ್ಲಿ ಗತಿಸಿದ್ದರು. ಮೂರು ದಶಕಗಳ ಕಾಲ ಸಿನಿಮಾ ರಂಗದಲ್ಲಿದ್ದ ನಂಜುಂಡ ಅವರ ಬದುಕು ಕೂಡ ಅಪ್ಪನ ರೀತಿಯಲ್ಲಿಯೇ ಅಂತ್ಯ ಕಂಡಿರುವುದು ಕಡು ವಿಷಾದದ ಸಂಗತಿ. ■